**ಎಂ ವಿ ಸಿ  1776/2023  ಆರ್ ಡಬ್ಲ್ಯೂ 1**

**ಸಾಕ್ಷಿಯನ್ನು ದಿ:  11.03.2025  ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ  ಪರ ಶ್ರೀ  ಜಿ ಕೆ ಪಿ   ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಅಧಿಕಾರ ಪತ್ರ ಹಾಗೂ ವಿಮಾ ಪಾಲಿಸಿಯ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಆರ್ 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪುನಃ ಕರೆಯತಕ್ಕದ್ದು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ  ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**

**ಎಂ ವಿ ಸಿ 1776/2023 ಆರ್ ಡಬ್ಲ್ಯೂ 1**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ**

ನಾನು ವಿಮಾ ಕಂಪನಿಗಳಲ್ಲಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. 2 ನೇ ಎದುರುದಾರ ವಿಮಾ ಕಂಪನಿಯಲ್ಲಿ ನಾನು ಒಂದೂವರೆ ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ನಮ್ಮ ವಿಮಾ ಕಂಪನಿಯ ವಕೀಲರು ಸಲ್ಲಿಸಿರುವ ತಕರಾರಿನ ಸಂಗತಿಗಳು ನನಗೆ ಗೊತ್ತಿವೆ. ಈ ಪ್ರಕರಣದಲ್ಲಿ ಒಳಗೊಂಡಿರುವ ಅಪಘಾತಕ್ಕೆ ಸಂಬಂಧಿಸಿದಂತೆ ನಮ್ಮ ವಿಮಾ ಕಂಪನಿಯಿಂದ ಆಂತರಿಕ ತನಿಖೆ ನಡೆಸಿ ವರದಿ ಪಡೆದುಕೊಂಡು ಸದರಿ ವರದಿ ಹಾಗೂ ಪೊಲೀಸ್ ದಾಖಲೆಗಳ ಆಧಾರದ ಮೇಲೆ ನಮ್ಮ ವಿಮಾ ಕಂಪನಿಯ ವಕೀಲರು ತಕರಾರು ಸಲಿಸ್ಲಿದ್ದಾರೆ ಎಂದರೆ ನಮ್ಮ ವಿಮಾ ಕಂಪನಿಯು ಆಂತರಿಕ ತನಿಖೆ ನಡೆಸಿಲ್ಲ. ಸಾಕ್ಷಿಯು ಮುಂದುವರಿದು ಪ್ರಸ್ತುತ ಪ್ರಕರಣದ ಅರ್ಜಿಯ ಆಧಾರದ ಮೇಲೆ ತಕರಾರು ಸಲ್ಲಿಸಿದ್ದು ತದನಂತರ ಪೊಲೀಸ್ ದಾಖಲೆಗಳ ಆಧಾರದ ಮೇಲೆ ತಕರಾರಿನಲ್ಲಿನ ಸಂಗತಿಗಳನ್ನು ತಿದ್ದುಪಡಿ ಮಾಡಿಕೊಂಡಿರುವುದಾಗಿ ಹೇಳುತ್ತಾರೆ. ಈ ಪ್ರಕರಣದ ಮೃತ ಹರೀಶ್ ಯಾವ ಊರಿನವರು ಎಂದು ನಾನು ತಿಳಿದು ಕೊಂಡಿಲ್ಲ. ಅಪಘಾತಪಡಿಸಿದ ಕಾರಿನ ಮಾಲೀಕನ ವಿಳಾಸವು ವಿಮಾ ಪಾಲಿಸಿಯಲ್ಲಿನ ನಮೂದುಗಳ ಆಧಾರದ ಮೇಲೆ ಗೊತ್ತಿದೆ. ನಾನು ಅಪಘಾತ ಸ್ಥಳವನ್ನು ನೋಡಿಲ್ಲ. ಈ ಪ್ರಕರಣದಲ್ಲಿ ಕೆ.ಆರ್.ಎಸ್ ಪೊಲೀಸರು ತನಿಖೆ ಕೈಗೊಂಡು ಸಲ್ಲಿಸಿರುವ ಪೊಲೀಸ್ ದಾಖಲೆಗಳನ್ನು ನಾನು ನೋಡಿದ್ದೇನೆ. ಸಾಕ್ಷಿ ಮುಂದುವರಿದು ಪೊಲೀಸರು ಸರಿಯಾಗಿ ತನಿಖೆ ನಡೆಸದೆ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಪೊಲೀಸರು ಸರಿಯಾಗಿ ತನಿಖೆ ನಡೆಸಿಲ್ಲ ಎಂದು ನಮ್ಮ ವಿಮಾ ಕಂಪನಿಯ ಕಡೆಯಿಂದ ಯಾವುದೇ ದೂರನ್ನು ನೀಡಿಲ್ಲ. ಮೊದಲ ತಕರಾರಿನಲ್ಲಿನ ಸಂಗತಿಗಳು ನನಗೆ ಗೊತ್ತಿವೆ. ನಮ್ಮ ಕಂಪನಿಯ ವಿಮೆಗೆ ಒಳಗೊಂಡಿರುವ 1 ನೇ ಎದುರುದಾರರ ಮಾಲೀಕತ್ವಕ್ಕೆ ಸೇರಿದ ಕಾರಿನ ತಪ್ಪಿನಿಂದ ಅಪಘಾತ ಸಂಭವಿಸಿದೆ ಎಂದು ಸದರಿ ತಕರಾರಿನಲ್ಲಿ ನಾವು ಒಪ್ಪಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅರ್ಜಿಯಲ್ಲಿನ ಸಂಗತಿಗಳ ಆಧಾರದ ಮೇಲೆ ಮೊದಲ ತಕರಾರು ಸಿದ್ದಪಡಿಸಿದ್ದಾಗಿ ಹೇಳುತ್ತಾರೆ.

ಮಹಜರಿನಲ್ಲಿನ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಕಾರಿನ ನೋಂದಣಿ ಸಂಖ್ಯೆಯ ಪ್ಲೇಟು ತುಂಡಾಗಿ ಬಿದ್ದಿದ್ದನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ ಮಹಜರಿನಲ್ಲಿ ಹೇಳಿದ್ದಾರೆ. ಆ ನೋಂದಣಿ ಪ್ಲೇಟ್ ನಲ್ಲಿ ಕಂಡು ಬಂದ ಸಂಖ್ಯೆಯ ಹೆಸರು ಕೆಎ 09 ಜೆಡ್ 1122 ಆಗಿದೆ. ಹಾಗೆ ಅಮಾನತ್ತುಪಡಿಸಿಕೊಂಡ ನಂಬರು ಪ್ಲೇಟ್ ನಲ್ಲಿ ಕಂಡು ಬಂದ ನೋಂದಣಿ ಸಂಖ್ಯೆಯ ಕಾರಿನ ಚಾಲಕನ ತಪ್ಪಿನಿಂದ ಅಪಘಾತ ಸಂಭವಿಸಿದೆ ಎಂದು ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಾಗಿ ತನಿಖೆ ನಡೆಸದೆ ಹಾಗೆ ಸಲ್ಲಿಸಿದ್ದಾರೆ ಎನ್ನುತ್ತಾರೆ.

ವಿವಾದಿತ ಅಪಘಾತ ದಿನದಂದು ಕೆಎ 09 ಜೆಡ್ 1122 ಸಂಖ್ಯೆಯ ಕಾರು ನಮ್ಮ ವಿಮಾ ಕಂಪನಿಯಿಂದ ವಿಮೆಗೆ ಒಳಗಾಗಿತ್ತು ಎಂದರೆ ಸರಿ. ನಮ್ಮ ವಿಮೆಗೆ ಒಳಪಟ್ಟಿರುವ ಮೊದಲನೇ ಎದುರುದಾರರ ಮಾಲೀಕತ್ವಕ್ಕೆ ಸೇರಿದ ಕಾರಿನಿಂದ ಅಪಘಾತವಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ಕೆ ಆರ್ ಎಸ್ ಪೊಲೀಸರು 1 ನೇ ಎದುರುದಾರರ ಕಾರಿನ ಚಾಲಕನ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಯಾವುದೇ ಲೋಪವಿಲ್ಲದೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯಿಂದ ವಿಮೆಗೆ ಒಳಗಾಗಿರುವ ಕಾರಿನಿಂದಲೇ ಅಪಘಾತ ಸಂಭವಿಸಿದ್ದರೂ ಸಹ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಬೇರೆ ಯಾವುದೋ ವಾಹನದಿಂದ ಹಿಟ್ ಅಂಡ್ ರನ್ ಅಪಘಾತ ಸಂಭವಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**